- ಭಾರತ ಸಂವಿಧಾನ ಅನುಚ್ಛೇದ 371 ಜೆ ರೀತ್ಯ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಪ್ರಾದೇಶಿಕ ಮಟ್ಟದ ಸ್ಥಳೀಯ ವೃಂದ ಕುರಿತಂತೆ ಅಧಿಸೂಚನೆ ಹೊರಡಿಸಲಾಗಿದೆ. ಈ ಹುದ್ದೆಗಳಿಗೆ ಸಂಬಂಧ ಪಟ್ಟ ವೈದ್ಯರು ಮತ್ತು ಸಿಬ್ಬಂದಿ ವರ್ಗದವರಿಂದ ಇಚ್ಛೆ ಪತ್ರವನ್ನು ಪಡೆದು, ತದನಂತರ ಖಾಲಿ ಹುದ್ದೆಗಳನ್ನು ಗುರುತಿಸಿ, ಅವುಗಳನ್ನು ಸ್ಥಳೀಯ ವೃಂದ ಮತ್ತು ಮೀಸಲಾತಿ ನಿಯಮಗಳನ್ವಯ ವರ್ಗೀಕರಿಸಿ, ತದನಂತರ ತಜ್ಞ ವೈದ್ಯರು ಹಾಗೂ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ, ದಂತ ಆರೋಗ್ಯಾಧಿಕಾರಿ ಮತ್ತು ಇತರೆ ಸಿಬ್ಬಂದಿ ವರ್ಗಗಳ ಹಲವು ವೃಂದಗಳ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ಹಾಗೂ ಇತರೆ ಹುದ್ದೆಗಳನ್ನು ಇಲಾಖಾ ನೇರ ನೇಮಕಾತಿ ಸಮಿತಿ ಮುಖಾಂತರ ನೇಮಕಾತಿ ಮಾಡಿಕೊಳ್ಳಲು ಮತ್ತು ಕೆಲವು ಹುದ್ದೆಗಳನ್ನು ಪದೋನ್ನತಿ ಮೂಲಕ ಭರ್ತಿ ಮಾಡಲು ಉದ್ದೇಶಿಸಲಾಗಿದೆ.

ಬಸವೇಶ್ವರ ನಗರದ ಶಾರದಾ ಕಾಲೋನಿ ಬಸ್ ನಿಲ್ದಾಣ

46(28) ಶ್ರೀ ಸುರೇಶ್ ಕುಮಾರ್ ಎಸ್.

ಅ) ರಾಜಾಜಿನಗರದ ವಿಧಾನಸಭಾ ಕ್ಷೇತ್ರದ ಬಸವೇಶ್ವರನಗರದ ಶಾರದಾ ಕಾಲೋನಿ ಬಸ್ ನಿಲ್ದಾಣದ ವಿಸ್ತೀರ್ಣವೆಷ್ಟು;

ಆ) ಹಾಗಾದರೆ ಈ ಬಸ್ ನಿಲ್ದಾಣದಿಂದ ಪ್ರತಿನಿತ್ಯ ಬೆಂಗಳೂರಿನಿಂದ ಹೊರ ಪ್ರದೇಶಗಳಿಗೆ ಪ್ರಯಾಣಿಕರನ್ನು ಯಾವ ಯಾವ ಊರುಗಳಿಗೆ ಕರೆದೊಯ್ಯಲಾಗುತ್ತಿದೆ.

ಇ) ಹಾಗಿದ್ದಲ್ಲಿ ಈ ಬಸ್ ನಿಲ್ದಾಣವನ್ನು ಆಧುನಿಕರಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)

ಅ) ರಾಜಾಜಿನಗರದ ವಿಧಾನಸಭಾ ಕ್ಷೇತ್ರದ ಬಸವೇಶ್ವರ ನಗರ ಶಾರದಾ ಕಾಲೋನಿಯ ಬಸ್ ನಿಲ್ದಾಣದ ವಿಸ್ತೀರ್ಣ 5,251.72 ಚದರ ಮೀಟರುಗಳಾಗಿರುತ್ತವೆ.

ಆ) ಈ ಬಸ್ ನಿಲ್ದಾಣದಿಂದ ಬಿಜಾಪುರ, ಕುಕ್ಕೆಸುಬ್ರಮಣ್ಯ, ಶೃಂಗೇರಿ, ಧರ್ಮಸ್ಥಳ, ಬೆಳ್ತಂಗಡಿ ಮತ್ತು ಶಿವಮೊಗ್ಗ ಸ್ಥಳಗಳಿಗೆ ಪ್ರಯಾಣಿಕರನ್ನು ಕರೆದೊಯ್ಯಲಾಗುತ್ತಿದೆ.

ಇ) ಸದರಿ ಬಸ್ ನಿಲ್ದಾಣದ ಆಧುನಿಕರಣಕ್ಕೆ ಸಂಬಂಧಿಸಿದಂತೆ, ಈ ಬಸ್ ನಿಲ್ದಾಣದ ನಿವೇಶನದಲ್ಲಿ Karnataka Power Transmission Corporation Limited (KPTCL) ಗೆ ಸಂಬಂಧಿಸಿದ 220KV Single circuit line ಹಾದು ಹೋಗುತ್ತಿದ್ದು, ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ. ಸದರಿ 220KV Single circuit line ಗಳನ್ನು ಸ್ಥಳಾಂತರಿಸಲು ಭೂಗತ ಕೇಬಲ್‌ಗಳನ್ನು ಅಳವಡಿಸಲು ಕೆಪಿಟಿಸಿಎಲ್ ರವರಿಗೆ ಸಂ. 1258/2013–14, ದಿನಾಂಕ:3–2–2014 ರಂದು ಪತ್ರ ಬರೆದು ಕೋರಲಾಗಿದ್ದು, ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.

ಈ 220 KV Single Circuit line ಗಳನ್ನು ಕೆಪಿಟಿಸಿಎಲ್ ನವರು ಸ್ಥಳಾಂತರಿಸಿದ ನಂತರ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ವತಿಯಿಂದ ಆಧುನೀಕರಣದ ಬಗ್ಗೆ ಮುಂದಿನ ಕ್ರಮಕೈಗೊಳ್ಳಲಾಗುವುದು.

ಶ್ರೀ ಎಸ್. ಸುರೇಶ್ ಕುಮಾರ್:– ಮಾನ್ಯ ಅಧ್ಯಕ್ಷರೆ, ಸದರಿ 220 KV Single circuit line ಗಳನ್ನು ಸ್ಥಳಾಂತರಿಸಲು, ಭೂಗತ ಕೇಬಲ್‌ಗಳನ್ನು ಅಳವಡಿಸಲು ಕೆಪಿಟಿಸಿಎಲ್ ರವರಿಗೆ ದಿನಾಂಕ:03.02.2014 ರಂದು ಪತ್ರ ಬರೆದು ಕೋರಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಈಗ ನಾವು ಜೂನ್ ತಿಂಗಳಿನಲ್ಲಿದ್ದು, ಜುಲೈ ತಿಂಗಳಿಗೆ ಪ್ರವೇಶ ಮಾಡುತ್ತೇವೆ. ಸಚಿವರೆ, ತಾವು ಇನ್ನೂ ಎಷ್ಟು ದಿವಸ ಪತ್ರ ಸಂಪರ್ಕದಲ್ಲಿರುತ್ತೀರಿ? ಯಾವಾಗ ಈ ಕಾರ್ಯ ಆಗುತ್ತದೆ?

ಶ್ರೀ ರಾಮಲಿಂಗಾರೆಡ್ಡಿ:– ಮಾನ್ಯ ಅಧ್ಯಕ್ಷರೆ, ಅಲ್ಲಿ 220 KV ಲೈನ್ ಬದಲಾವಣೆಯಾಗಬೇಕಾಗಿದೆ. ನಾವು ಪತ್ರ KPTCL ಗೆ ಬರೆದಿದ್ದೇವೆ. ಅವರು ತಾಂತ್ರಿಕವಾಗಿ ಸ್ವಲ್ಪ ಸಮಸ್ಯೆಯಿದೆ ಎಂದು ಹೇಳುತ್ತಿದ್ದಾರೆ. ನಾವು ಅವರಿಗೆ ಎಷ್ಟು ಹಣ ಖರ್ಚಾದರೂ ಸಹ ಕೊಡುತ್ತೇವೆಂದು ಹೇಳಿದ್ದೇವೆ. ಇದರ ಬಗ್ಗೆ pursue ಮಾಡುವುದಕ್ಕೆ ನಾನು ಎಂ.ಡಿ.ಯವರಿಗೆ ಹೇಳಿದ್ದೇನೆ. ಮಾನ್ಯ ಸುರೇಶ್ ಕುಮಾರ್ ರವರು ಸಹ ಇದಕ್ಕೆ ಸಹಾಯ ಮಾಡಲಿ. ಈ ಕೆಲಸ ಮುಗಿದ ತಕ್ಷಣ ಬಸ್ ನಿಲ್ದಾಣವನ್ನು ಯಾವ ರೀತಿ ಬೇಕೊ ಆ ರೀತಿ ಕಟ್ಟಿಸಿಕೊಳ್ಳೋಣ.

ಶ್ರೀ ಎಸ್. ಸುರೇಶ್ ಕುಮಾರ್:– ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಸಾರಿಗೆ ಸಚಿವರಿರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, KPTCL ರವರಿಗೆ ಏನು ಪತ್ರ ಬರೆದಿದ್ದಾರೆ, ಅವರು ಆ ಪ್ರತಿಯನ್ನು ನನಗೆ ಕೊಡಲಿ. ನಾನು ಅದನ್ನು pursue ಮಾಡಿಸಿ ಮಾಡಿಸಿಕೊಡುತ್ತೇನೆ.

ಇಲಾಖೆಯ ಅಭಿವೃದ್ಧಿ ಯೋಜನೆಗಳು

49(322); ಶ್ರೀ ಶ್ರೀನಿವಾಸ್ ಜಿ.ಎಚ್. (ತರೀಕೆರೆ)

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ/ಮಂಡಳಿಗಳ ಯೋಜನೆಗಳು ಜನ ಸಾಮಾನ್ಯರನ್ನು ತಲುಪುವಲ್ಲಿ ವಿಫಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಯೋಜನೆಗಳನ್ನು ಸದ್ಬಳಕೆ ಮಾಡಿಕೊಳ್ಳುವಲ್ಲಿ ಮಾಹಿತಿಯ ಕೊರತೆಯಿದೆಯೇ ಮತ್ತು ಅತೀ ಬಿಗಿಯಾದ ನಿಯಮಗಳು ಸಲ್ಲಿಸಬೇಕಾದ ದಾಖಲೆಗಳ ಸರಳೀಕರಣ ಮಾಡಬೇಕಾಗಿರುವುದರಿಂದ ಇದರ ಬಗ್ಗೆ ಸರ್ಕಾರದ ನಿರ್ಧಾರವೇನು?

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಸಚಿವರು)